


# ದೂರಶಿಕ್ಷಣ ನಿರ್ದೇಶನಾಲಯ

# ವಿವರಣಾ ಪುಸ್ತಕ
# PROSPECTUS

## ೨೦೧೩-೧೪




ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583 276
ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ
www.kannadauniversity.org

## ಸೂಚನೆ

ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಶಿಕ್ಷಣ ಕಾರ್ಯಕ್ರಮಗಳ ಶಿಕ್ಷಣಕ್ರಮಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ತಮ್ಮ ಬೋಧನಾ/ಪ್ರವೇಶಾತಿ ಶುಲ್ಕದ ಚಲನ್/ಡಿಡಿ ಸಂಖ್ಯೆ ಮತ್ತು ದಿನಾಂಕ ಇವುಗಳನ್ನು ಅರ್ಜಿಯಲ್ಲಿ ನಮೂದಿಸಬೇಕು. ಪ್ರವೇಶ ಸಂದರ್ಭದಲ್ಲಿ ಮೂಲ ಪ್ರಮಾಣ ಪತ್ರಗಳನ್ನು ಸಂಯೋಜಕರಿಗೆ ಸಾದರಪಡಿಸಿ ನೆರಳಚ್ಚು ಪ್ರಮಾಣ ಪತ್ರಗಳಿಗೆ ದೃಢೀಕರಿಸಿಕೊಂಡು ಅರ್ಜಿಯೊಂದಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯದಲ್ಲಿಯ ಬ್ಯಾಂಕ್ ಆಫ್ ಇಂಡಿಯ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಈ ಬ್ಯಾಂಕುಗಳ ಯಾವುದೇ ಶಾಖೆಯಲ್ಲಿ ಯಾವುದೇ ಶುಲ್ಕವನ್ನು ಪಾವತಿಯಾಗುವಂತೆ ಚಲನ್/ಡಿಡಿ ರೂಪದಲ್ಲಿ ಪಾವತಿಸಬಹುದು. ಡಿಡಿ ಯನ್ನು **'ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ'** ಇವರ ಹೆಸರಿಗೆ ಪಡೆಯತಕ್ಕದ್ದು. ಡಿಡಿ ಜೊತೆಗೆ ಅಭ್ಯರ್ಥಿಯು ತನ್ನ ಹೆಸರು, ಆಯ್ದುಕೊಂಡಿರುವ ಶಿಕ್ಷಣಕ್ರಮ, ಅಧ್ಯಯನ ಕೇಂದ್ರ ಮತ್ತು ನೋಂದಣಿ ಸಂಖ್ಯೆ ಇವುಗಳನ್ನು ತಪ್ಪದೇ ನಮೂದಿಸಿ, ಭರ್ತಿ ಮಾಡಿದ ಅರ್ಜಿಯೊಂದಿಗೆ ಲಗತ್ತಿಸಿ ಕಳುಹಿಸಬೇಕು.

ಭರ್ತಿ ಮಾಡಿದ ಅರ್ಜಿಯ ಜೊತೆಗೆ ಶುಲ್ಕ ಪಾವತಿಸಿದ ಚಲನ್/ಡಿಡಿ, ಸಂಬಂಧಿಸಿದ ನೆರಳಚ್ಚು ಪ್ರತಿಗಳು (ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿರಬೇಕು), ಸ್ಟ್ಯಾಂಪ್ ಅಳತೆಯ ಮೂರು ಭಾವಚಿತ್ರಗಳನ್ನು ಅವುಗಳಲ್ಲಿ ಒಂದು ಭಾವಚಿತ್ರವನ್ನು ಪ್ರವೇಶ ಅರ್ಜಿಯ ಮೇಲೆ ಅಂಟಿಸಬೇಕು. ಉಳಿದ ಎರಡು ಭಾವಚಿತ್ರಗಳ ಹಿಂದುಗಡೆ ಅಭ್ಯರ್ಥಿಯ ಹೆಸರು, ಅರ್ಜಿ ಸಂಖ್ಯೆ, ಶಿಕ್ಷಣಕ್ರಮ ಇವುಗಳನ್ನು ಬರೆದು ಲಕೋಟೆಯೊಂದಕ್ಕೆ ಹಾಕಿ ಅರ್ಜಿಯ ಜೊತೆ **ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೫೮೩ ೨೭೬** ಈ ವಿಳಾಸಕ್ಕೆ ನೋಂದಾಯಿತ ಅಂಚೆ/ಕೊರಿಯರ್/ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಬೇಕು ಅಥವಾ ಖುದ್ದಾಗಿ ಸಲ್ಲಿಸಬೇಕು. ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ದ್ವಿಪ್ರತಿಯಲ್ಲಿ ಸಂಬಂಧಪಟ್ಟ ಅಧ್ಯಯನ ಕೇಂದ್ರದ ಸಂಯೋಜಕರಿಗೆ ಸಲ್ಲಿಸಬೇಕು.

### ಶೈಕ್ಷಣಿಕ ಚಟುವಟಿಕೆಗಳ ದಿನಸೂಚಿ

| ವಿವರಗಳು | ತಿಂಗಳು ಮತ್ತು ದಿನಾಂಕ |
|---|---|
| **ಎಲ್ಲ ಶಿಕ್ಷಣಕ್ರಮಗಳಿಗೆ ಪ್ರವೇಶ** | |
| ದಂಡಶುಲ್ಕವಿಲ್ಲದೆ | ಡಿಸೆಂಬರ್ ೩೧, ೨೦೧೩ |
| ೧೦೦ ರೂ. ದಂಡಶುಲ್ಕ ಸಹಿತ | ಜನವರಿ ೩೧, ೨೦೧೪ |
| ೨೦೦ ರೂ. ದಂಡಶುಲ್ಕ ಸಹಿತ | ಫೆಬ್ರವರಿ ೨೦, ೨೦೧೪ |
| **ಸ್ನಾತಕೋತ್ತರ ಪ್ರವೇಶ ಪೂರ್ವಸಿದ್ಧತಾ (Master Preparatory Programme) ಪರೀಕ್ಷೆ** | |
| (ನಿಯಮ–೧ರ ವಿದ್ಯಾರ್ಥಿಗಳಿಗೆ ಮಾತ್ರ) | ಫೆಬ್ರವರಿ ೨೫, ೨೦೧೪ |
| ಸಂಪರ್ಕ ಕಾರ್ಯಕ್ರಮ | ಏಪ್ರಿಲ್–ಮೇ ೨೦೧೪ |
| ನಿಯೋಜಿತ ಸಂಪ್ರಬಂಧ, ಗೃಹಲೇಖನ, ವರದಿ ಸಲ್ಲಿಕೆ | ಮೇ ೧೦, ೨೦೧೪ |
| ೩೦೦ ರೂ. ದಂಡಶುಲ್ಕದೊಂದಿಗೆ | ಮೇ ೩೦, ೨೦೧೪ |
| ಒಂದು ವರ್ಷ ಹಿಂದಿನವರಿಗೆ | ರೂ. ೬೦೦ |
| ಅದಕ್ಕಿಂತ ಹಿಂದಿನವರಿಗೆ | ರೂ. ೧೦೦೦ |
| **ಪರೀಕ್ಷಾ ಶುಲ್ಕ ಪಾವತಿ** | |
| ಪರೀಕ್ಷಾ ಅರ್ಜಿಯೊಂದಿಗೆ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಶುಲ್ಕ ಪಾವತಿ ಮಾಡಿದ ಎಲ್ಲಾ ರಸೀದಿಗಳ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು. | |
| ದಂಡ ಶುಲ್ಕವಿಲ್ಲದೆ | ಏಪ್ರಿಲ್ ೩೦, ೨೦೧೪ |
| ೨೦೦ ರೂ. ದಂಡಶುಲ್ಕದೊಂದಿಗೆ | ಮೇ ೧೫, ೨೦೧೪ |
| **ವಾರ್ಷಿಕ ಪರೀಕ್ಷೆ** | ಮೇ – ಜೂನ್ ೨೦೧೪ |
| **ಪರೀಕ್ಷೆಗಳ ಫಲಿತಾಂಶ ಪ್ರಕಟಣೆ** | ಜುಲೈ – ಆಗಸ್ಟ್ ೨೦೧೪ |

ಮೇಲಿನ ಕೊನೆಯ ದಿನಾಂಕ ಮುಗಿದ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಕೇಂದ್ರ ಕಚೇರಿಯ ಪ್ರವೇಶಾತಿ ವಿಭಾಗ ಮತ್ತು ಅಧ್ಯಯನ ಕೇಂದ್ರಗಳಲ್ಲದೆ ಇದೇ ವಿಶ್ವವಿದ್ಯಾಲಯದ ಬೇರೆ ವಿಳಾಸಕ್ಕೆ/ವಿಭಾಗಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಸ್ವೀಕೃತ ಅರ್ಜಿಗಳು ಮೇಲೆ ತಿಳಿಸಿದ ವಿಧಾನಗಳಲ್ಲಿ **ಭರ್ತಿ ಮಾಡಿಲ್ಲದಿದ್ದರೆ ಅವು ನಿರಾಕರಣೆಗೆ ಒಳಗಾಗುತ್ತವೆ.**